ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ

ಚನ್ನಗಿರಿ .

ಸಿಸಿ ನಂ.**66/2021**

ಹೆಸರುಃ  ಮಂಜಪ್ಪ                                                                 ಚಾಸಾಃ  1

ತಂದೆಃ ಹನುಮಂತಪ್ಪ                                                               ಫ್ರಾಸಾ: 1

ವಯಸ್ಸುಃ  49

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ   ಕಂಚುಗಾರನಹಳ್ಳಿ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 07-07-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ  ಕಲಂ 299 ರಡಿಯಲ್ಲಿ  ಮಾನ್ಯ ಸಸಅ ರವರಿಂದಃ**

ದಿಃ21.02.2014 ರಂದು ನಾನು ಸಂಜೆ ಸಾಗರಪೇಟೆ ಗ್ರಾಮಕ್ಕೆ ಹೋಗಿ ಬೈಕ್ ನ್ನು ರಿಪೇರಿ ಮಾಡಿಸುತ್ತಿದ್ದಾಗ ನಿನ್ನೆ ಸುಮಾರು 7.00 ಗಂಟೆಗೆ ನಮ್ಮ ಗ್ರಾಮದ ವಾಸಿ ಕುಮಾರ್ ಬಿನ್ ಅಣ್ಣಪ್ಪ ಇಬರುನನ್ನ ಮೊಬೈಲ್ ಕರೆ ಮಾಡಿ ನಮ್ಮ ಊರಿನ ಚಂದ್ರಶೇಖರಪ್ಪ ಬಿನ್ ಪರಮೇಶ್ವರಪ್ಪನವರಿಗೆ ಆಟೋ ರಿಕ್ಷಾದಲ್ಲಿ ಅಪಘಾತವಾಗಿದೆ ಅವರನ್ನು ಬಸವಪಟ್ಟಣ ಕುಸಗೋರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೇವೆ ಎಂದು ಹೇಳಿದ. ನಂತರ ನಾನು ಚಂದ್ರಶೇಖರಪ್ಪನವರ ಹೆಂಡತಿಯನ್ನು ಕರೆದುಕೊಂಡು ಆಸ್ಪತ್ರೆಗೆ ಹೋದಾಗ  ಅಲ್ಲಿ ಕೆಎ 27/5947 ನೊಂದಣಿ ಸಂಖ್ಯೆಯ ಆಟೋ ರಿಕ್ಷಾ ನಿಂತಿತ್ತು. ಅಲ್ಲಿ ದಾಗಿನಕಟ್ಟೆಯ ಇಬ್ಬರುನಿಂತಿದ್ದರು. ಚಂದ್ರಶೇಖರಪ್ಪನವರಿಗೆ ತಲೆಗೆ, ಎಡಗಾಲಿಗೆ ಮತ್ತು ಎದೆಗೆ ಪೆಟ್ಟು ಬಿದ್ದಿತ್ತು. ಚಂದ್ರಶೇಖರಪ್ಪನವರಗರಿಗೆ ಅಪಘಾತ ಹೇಗೆ ಆಯಿತು ಎಂದು ಕೇಳಿದಾಗ ದಾಗಿನಕಟ್ಟೆಯಿಂದ ಬಸವಪಟ್ಟಣಕ್ಕೆ ನಾನು ಮೇಲ್ಕಂಡ ಆಟೋದಲ್ಲಿ ಬರುತ್ತಿದ್ದಾಗ ಅದರ ಚಾಲಕ ದಾಗಿನಕಟ್ಟೆಯ ರಂಗಸ್ವಾಮಿ ರೆಡ್ಡಿ ಈತನು ಅತೀವೇಗ ಅಜಾಗರೂಕತೆಯಿಂದ ಚಾಲನ ಮಾಡಿ ದಾಗಿನಕಟ್ಟೆ ಕೆರೆ ಕೋಡಿ ಹತ್ತಿರ ಪಲ್ಟಿ ಹೊಡೆಸಿದ್ದರಿಂದ ನನಗೆ ಪೆಟ್ಟುಬಿದ್ದು ಗಾಯಗಳಾಗಿರುತ್ತವೆ ಎಂದು ಹೇಳಿ ಮತ್ತು ಅಪಘಾತವಾದಗ ಸಂಜೆ 6.45 ಗಂಟೆ ಆಗಿತ್ತು ಎಂದು ಹೇಳಿದ. ನಂತರ ಕುಸಗೋರು ಡಾಕ್ಟರ್ ರವರ ಸೂಚನೆ ಮೇರೆಗೆ ಚಂದ್ರಶೇಖರಪ್ಪನವರನ್ನು ದಾವಣಗೆರೆಯ ಎಸ್  ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು ಅವರು ರಾತ್ರಿ 9.55 ಗಂಟೆಗೆ ಮರಣ ಹೊಂದಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ದೂರನ್ನು ದಿನಾಂಕಃ22.02.2014 ರಂದು ನೀಡಿರುತ್ತೇನೆ. ದೂರನ್ನು ನಿಪಿ 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅಪಘಾಕ್ಕೊಳಗಾದ ಆಟೋವನ್ನು ನೋಡಿದರೆ ಗುರುತಿಸುತ್ತೇನೆ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಚನ್ನಗಿರಿ.